"ನೋ ಥ್ಯಾಂಕ್ಸ್. ಲೆಮನ್ ಸೋಡಾ ಇದ್ರೆ ಬೇಕು."

ನಾನು ಫ್ರಿಡ್ಜ್‌ನಿಂದ ಲೆಮನ್‌ಸೋಡಾ ತಂದು ಅವರೆದುರು ಲೋಟಾ ಸಹಿತ ಇಟ್ಟೆ.

"ಗಿವ್ ಮಿ ಕಂಪನಿ."

ನಾನು ಲೆಮನ್ ಸೋಡಾ ತೆಗೆದುಕೊಂಡು ಅವರೆದುರು ಕೂತೆ.

ನಾವು ಲೋಟಾಗಳನ್ನು ಒಂದಕ್ಕೊಂದು ತಾಗಿಸಿ 'ಚಿಯರ್ಸ್' ಎಂದು ಲೆಮನ್ ಸೋಡಾ ಹೀರತೊಡಗಿದೆವು. ಬೇಸಿಗೆಯ ಅಸಾಧ್ಯ ಧಗೆಗೆ ಅದು ಹಿತಕರವಾಗಿತ್ತು.

ಡಾ. ಸೋನಿಪತ್ ನಮ್ಮ ಬೀದಿಗೆ ಬಂದು ಎರಡು ತಿಂಗಳುಗಳು ಉರುಳಿದ್ದವು. ನಾನಾಗಿ ಅವರನ್ನು ಮಾತಾಡಿಸಲು ಹೋಗಿರಲಿಲ್ಲ. ನನ್ನದೇ ಕೆಲಸಗಳು ಕೈ ತುಂಬಾ ಇರುವಾಗ ಬೇರೆಯವರ ಉಸಾಬರಿ ನನಗೇಕೆಂದು ಸುಮ್ಮನಿದ್ದೆ. ಆದರೆ, ಕಳೆದ ಸಂಜೆ ವಾಕಿಂಗ್ ಟೈಂನಲ್ಲಿ ಸಿಕ್ಕ ಡಾ. ಸೋನಿಪತ್, "ಜಂಟಲ್‌ಮ್ಯಾನ್, ನನಗೆ ನಿನ್ನಲ್ಲಿ ಮಾತಾಡಲಿಕ್ಕಿದೆ. ನಾನು ಸಂಜೆ ಸರಿಯಾಗಿ ನಾಲ್ಕು ಗಂಟೆಗೆ ನಿನ್ನ ಮನೆಗೆ ಬಂದು ಬಿಡುತ್ತೇನೆ" ಎಂದು ಹೇಳಿದ್ದರು. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಅವರ ಅಪ್ಪಟ ಬ್ರಿಟಿಷ್ ಇಂಗ್ಲಿಷನ್ನು ಅರಗಿಸಿಕೊಳ್ಳಲು ನಾನು ಒದ್ದಾಡಬೇಕಿತ್ತು.

"ನಿನಗೆ ಗೊತ್ತಾ? ನಾನು ಬ್ರಿಟನ್ನಿನಲ್ಲಿ ನಲವತ್ತು ವರ್ಷ ಇದ್ದೆ. ಯಾರ್ಕ್ ಶೈರಿನ ಹ್ಯಾಲಿಪ್ಯಾಕ್ಸ್‌ನಲ್ಲಿ ಕೆಲವು ವರ್ಷ ಇದ್ದೆ. ಅಲ್ಲಿನ ಹವಾಮಾನ ಒಂದನ್ನು ಬಿಟ್ಟರೆ ಆ ಊರು ಥೇಟ್ ನಿಮ್ಮ ಮಂಗಳೂರಿನಂತೆ ಇದೆ. ಅಲ್ಲಿರುವವರಲ್ಲಿ ಹೆಚ್ಚಿನವರು ಪಾಕಿಸ್ತಾನಿಗಳು ಮತ್ತು ಇಂಡಿಯನ್ಸ್. ಹಾಗಾಗಿ ಹ್ಯಾಲಿಪ್ಯಾಕ್ಸ್‌ನ ಬೀದಿಗಳು ಇಂಡಿಯಾದ ಬೀದಿಗಳ ಹಾಗೇ ಇವೆ."

ನಾನು ತುಟಿ ಅರಳಿಸಿದೆ.

"ನಾನು ಹ್ಯಾಲಿಪ್ಯಾಕ್ಸ್‌ಗೆ ಹೋಗಿದ್ದೆ ಸರ್. ಅಲ್ಲಿ ಡಾ. ಶಾಂತಾ ರಾವ್ ಎಂಬವರ ಮನೆಯಲ್ಲಿ ನಾಲ್ಕು ದಿನ ಉಳಕೊಂಡಿದ್ದೆ. ಆಗಲೇ ನಿಮ್ಮ ಪರಿಚಯವಿರುತ್ತಿದ್ದರೆ ನಿಮ್ಮ ಮನೆಗೂ ಬರಬಹುದಿತ್ತು. ಒಟ್ಟಿನಲ್ಲಿ ಅದೊಂದು ಲೋಸ್ಟ್ ಛಾನ್ಸ್."

"ಹ್ಞೂಂ" ಡಾ. ಸೋನಿಪತ್ ಹನಿಹನಿಯಾಗಿ ಶರಬತ್ತು ಹೀರುತ್ತಾ ಮಾತಾಡತೊಡಗಿದರು. "ನಾನು ಈ ದಿನಗಳನ್ನು ಹ್ಯಾಲಿಪ್ಯಾಕ್ಸಿನಲ್ಲಿ ಕಳೆಯಬೇಕಿತ್ತು. ಬಟ್ ಇಲ್ ಫೇಟ್! ಎಲ್ಲಿಯ ಇಂಗ್ಲೆಂಡು, ಎಲ್ಲಿಯ ನಿನ್ನ ಈ ಕಚಡಾ ಊರು? ಈ ಊರು, ಊರ ಜನ ಎಲ್ಲಾ ಹಾರಿಬಲ್. ಲ್ಯಾಂಡ್ ಫೋನ್ ಸರಿಯೇ ಇರುವುದಿಲ್ಲ. ಪವರ್ ಒಮ್ಮೆ ಕಟ್ಟಾದರೆ ವಾರಗಟ್ಲೆ ಮಾಯ. ನಲ್ಲಿ ತಿರುಗಿಸಿದಾಗಲೆಲ್ಲಾ ಗೊರ್ರ್ ಶಬ್ದ. ಊರಿನ ಏಕೈಕ ಮಾರ್ಗಕ್ಕೆ ಡಾಂಬರಿಲ್ಲ. ಅಲ್ಲಿ ಹ್ಯಾಲಿಪ್ಯಾಕ್ಸಿನಲ್ಲಿ 24 ಗಂಟೆಯೂ ನಲ್ಲಿಯಲ್ಲಿ ನೀರು ಮತ್ತು ಪವರ್ ಸಪ್ಲೈ. ಏನಾದರೂ ಹೆಚ್ಚು ಕಡಿಮೆಯಾಯಿತೋ ಸಂಬಂಧಿಸಿದ ಅಧಿಕಾರಿ ಸಸ್ಪೆಂಡ್. ನೀವು ಇಲ್ಲಿ ಏನೇ ಆದರೂ ಹಳ್ಳದ ಎಮ್ಮೆಗಳ ಹಾಗೆ ಹಾಯಾಗಿದ್ದೀರಿ. ಯುವರ್ ಇಲ್ ಫೇಟ್."

"ಸರ್, ರಕ್ತ ಬಿಸಿ ಇರುವಾಗ ನಾನು ಸ್ವಲ್ಪ ಪ್ರಯತ್ನ ಪಟ್ಟೆ. ನನ್ನ ವಿಷಯ ಬಿಡಿ. ಸ್ವಯಂ ಎಂಎಲ್ಲೆ, ಎಂ.ಪಿಗಳಿಂದಲೂ ಪ್ರಾಬ್ಲೆಂ ಸಾಲ್ವ್ ಆಗಲ್ಲ. ಹಾಗಾಗಿ ಬರಿದೆ ಜಗಳವಾಡುವುದಕ್ಕಿಂತ ಹೊಂದಿಕೊಂಡು ಹೋಗುವುದೆ ಬೆಟರ್ ಅಂತ ದಿನ ದೂಡುತ್ತಿದ್ದೇನೆ. ಆಲಸಿಗಳೇ ತುಂಬಿರುವಲ್ಲಿ ಕೆಲಸ ಮಾಡೋದೇ ಅಪರಾಧ ಸರ್."

"ನೀನು ಇವೇಸಿವ್ ರಿಪ್ಲೈ ಕೊಡುವ ಇರ್ರೆಸ್ಪಾನ್ಸಿಬಲ್ ಮ್ಯಾನ್. ನನ್ನನ್ನು ನೋಡು. 82 ಆಯಿತು. ಈಗಲೂ ನ್ಯಾಯಕ್ಕಾಗಿ ಫೈಟ್ ಮಾಡ್ತಿದ್ದೀನಿ. ಐ ಯಾಂ ಫೈಟಿಂಗ್ ಫಾರ್ ಸರ್ವೈವಲ್. ನೀವೆಲ್ಲಾ ಇದ್ದೀರಿ. ಯೂಸ್‌ಲೆಸ್ಸ್ ಗೂಸ್."

ಅವರ ಬೈಗುಳಕ್ಕೆ ನಾನು ನಕ್ಕೆ. "ನೀವು ಬಯ್ಯಿರಿ ಸರ್. ನನ್ನದೇನು ಕುದಿಯುವ ರಕ್ತವಲ್ಲ. ಆದರೆ,